ಓ. ಎಸ್ ಃ 460 /2013 .

ಪಿ ಡಬ್ಲ್ಯೂ ಃ 01 .

ಸಾಕ್ಷಿಗೆ ದಿನಾಂಕಃ 10.10.2017 ರಂದು ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಬಿಎಸ್ಎ ವಕೀಲರಿಂದ ಃ

ದಾವಾ ಅನುಸೂಚಿ ಆಸ್ತಿಯನ್ನು ನನ್ನ ತಾಯಿ ಸುಬ್ಬಮ್ಮನವರಿಗೆ ಸರ್ಕಾರದಿಂದ ನೀಡಿರುತ್ತಾರೆ. ಆ ಬಗ್ಗೆ ಬರವಣಿಗೆ ದಾಖಲೆಯನ್ನು ಸರ್ಕಾರದವರು ನೀಡಿಲ್ಲ, ಪಂಚಾಯ್ತಿಯವರು ದಾಖಲೆ ನೀಡಿದ್ದಾರೆ. ನನ್ನ ತಾಯಿಗೆ ಯಾವುದೇ ಹಕ್ಕುಪತ್ರವನ್ನು ಪಂಚಾಯಿತಿಯವರು ನೀಡಿಲ್ಲ , ಆ ಬಗ್ಗೆ ಖಾತಾ ಪುಸ್ತಕದಲ್ಲಿ ಬರವಣಿಗೆ ಮಾಡಿದ್ದಾರೆ. ಖಾತೆ ಮಾಡಿದ ಬಗ್ಗೆ ಮ್ಯುಟೇಷನ್ ದಾಖಲೆ ಇದ್ದು ಅದರಲ್ಲಿ ಅಳತೆ ಮತ್ತು ಚೆಕ್ಕುಬಂದಿಯನ್ನು ಬರೆದಿದ್ದಾರೆ. 1992 ರಲ್ಲಿ ಸ್ವಲ್ಪ ಭಾಗದ ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ನನ್ನ ತಾಯಿ ಹೆಸರಿನಲ್ಲಿ ಖಾತೆ ಇತ್ತು. ದಾವಾ ಸಂಪೂರ್ಣ ಆಸ್ತಿಯ ಪೂ.ಕ್ಕೆ ನಾರಾಯಣಪ್ಪನವರಿಗೆ ಸೇರಿದ ಖಾಲಿ ಜಾಗ , ಪ.ಕ್ಕೆ ನಂಜಯ್ಯ ಮತ್ತು ಮರಿಗೌಡರವರಿಗೆ ಸೇರಿದ ಜಾಗ , ಉ.ಕ್ಕೆ ರಸ್ತೆ , ದ.ಕ್ಕೆ ಸೋಮಣ್ಣನವರಿಗೆ ಸೇರಿದ ಜಾಗ ಇದೆ. ಈಗ ದ.ಕ್ಕೆಃ ಪ್ರತಿವಾದಿಗೆ ಸೇರಿದ ಮನೆ ಮತ್ತು ಖಾಲಿ ಜಾಗ ಇದೆ. ನನ್ನ ಹೆಂಡತಿ ಶಶಿಕಲಾ ರವರು 2010 ರಿಂದ 2015 ರ ಸಾಲಿನಲ್ಲಿ ಬೆಳಗೊಳ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದರು. ಸದರಿ ಅವಧಿಯಲ್ಲಿ ಮನೆ ಕಟ್ಟಲು ನನಗೆ

ಪರವಾನಗೆ ನೀಡಿದ್ದಾರೆ ಎಂದರೆ ಹೌದು. ಪರವಾನಿಗೆ ನೀಡುವ ಪೂರ್ವದಲ್ಲಿ ಪಂಚಾಯಿತಿಯವರು ಸ್ಥಳ ಕ್ಕೆ ಬಂದು ಅಳತೆ ಮಾಡಿದ್ದಾರೆ. ಸದರಿ ಅಳತೆಯ ಬಗ್ಗೆ ಪ್ರತಿವಾದಿಗೂ ನೋಟಿಸ್ ಕೊಟ್ಟಿದ್ದಾರೆ. ನಮಗೆ ಸೇರಿದ ಜಾಗಕ್ಕೆ ಕಾಂಪೌಂಡ್ ಹಾಕಿಕೊಂಡಿದ್ದೇವೆ. ಸದರಿ ಕಾಂಪೌಂಡ್ ಈಗಲೂ ಅಸ್ತಿತ್ವದಲ್ಲಿ ಇದೆ. ವಾದ ಪತ್ರದಲ್ಲಿ ಪ್ರತಿಕೂಲ ಸ್ವಾಧೀನತೆಯ ಬಗ್ಗೆ ಹೇಳಿಕೊಂಡಿದ್ದು ಯಾರ ವಿರುದ್ದ ಪ್ರತಿಕೂಲ ಸ್ವಾಧೀನತೆಯ ಹಕ್ಕನ್ನು ನೀಡುತ್ತಿದ್ದೀರಿ ಎಂದರೆ ಸಾಕ್ಷಿಯು ನಮ್ಮದೇ ಆಸ್ತಿ ಎಂದು ನುಡಿಯುತ್ತಾರೆ. ನಾವು ಬೇರೆಯವರ ಹಕ್ಕಿನ ವಿರುದ್ದವಾಗಿ ದಾವಾ ಆಸ್ತಿಯನ್ನು ಅನುಭವಿಸುತ್ತಿಲ್ಲ. ಪ್ರತಿವಾದಿ ದಾವಾ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದ ಕಾರಣ ದಿ. 15.09.2013 ರಂದು ಪಂಚಾಯಿತಿಯವರಿಗೆ ಅರ್ಜಿ ನೀಡಿದ್ದೆನು. ಅದೇ ರೀತಿ ಪಿಡಿಓ ರವರ ಮೂಲಕ ದಿ. 15.10.2013 ರಂದು ಕೆಆರ್ ಸಾಗರ ಪೋಲಿಸ್ ರಿಗೆ ಪತ್ರ ಬರೆದಿದ್ದು ಸದರಿ ದಾಖಲೆಗಳನ್ನು ಹಾಜರುಮಾಡಿಲ್ಲ. ಪ್ರತಿವಾದಿಗೆ ಕೆಆರ್ ಸಾಗರ ಪೋಲಿಸ್ ರು ಬರವಣಿಗೆ ಮೂಲಕ ಎಚ್ಚರಿಕೆಯನ್ನು ನೀಡಿರುತ್ತಾರೆ. ನನಗೆ ಈ ದಾವೆಯಲ್ಲಿ ದೊರೆತ ಏಕ ಪಕ್ಷೀಯ ಪ್ರತಿಬಂಧಜ್ಞಾನೆ ಆದೇಶದ ಪ್ರತಿಯನ್ನು ಕೆಆರ್ ಸಾಗರ ಪೋಲಿಸ್ ರಿಗೆ ನೀಡಿ ಅವರ ಮೂಲಕ ಪ್ರತಿವಾದಿ ಹಾಕಿಕೊಂಡಿದ್ದ ತಂತಿ ಬೇಲಿಯನ್ನು ಹಾಳುಮಾಡಿರುತ್ತೇನೆ ಎಂದರೆ ಸುಳ್ಳು. ಆ ಬಗ್ಗೆ ಪ್ರತಿವಾದಿ ನನ್ನ ಮತ್ತು ಸ್ಥಳ ಕ್ಕೆ ಪೋಲಿಸ್ ರ ವಿರುದ್ದ ದೂರು ದಾಖಲಿಸಿದ್ದಾರೆ ಎಂದರೆ ಹೌದು. ಸಾಕ್ಷಿಗೆ ಒಂದು ಫೋಟೋ ತೋರಿಸಿ ಅದರಲ್ಲಿ ಕಾಣಿಸುವ ಶೌಚಾಲಯ ದಾವಾ ಆಸ್ತಿಯಲ್ಲಿ ಬರುತ್ತದೆಯೇ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಫೋಟೋವನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣಿಸುವ ಮಹಿಳೆ ಮತ್ತು ಪುರುಷ ಪ್ರತಿವಾದಿ ಮತ್ತು ಆತನ ಹೆಂಡತಿ ಎಂದರೆ ಹೌದು.

ಈಗ ಸದರಿ ಶೌಚಾಲಯದ ಕಟ್ಟಡ ಇಲ್ಲ ಎಂದರೆ ಹೌದು. ಸಾಕ್ಷಿಗೆ ಪುನಃ 12 ಫೋಟೋಗಳನ್ನು ತೋರಿಸಿ ಅದರಲ್ಲಿ ಕಾಣಿಸುವ ವ್ಯಕ್ತಿ ನಾನು ಎಂದರೆ ಹೌದು. ನಾನು ಸದರಿ ಮೇಲೆ ಹೇಳಿದ ಶೌಚಾಲಯವನ್ನು ಕಿತ್ತು ಹಾಕುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ನನ್ನ ಜಾಗವನ್ನು ಕ್ಲೀನ್ ಮಾಡುತ್ತಿದ್ದಾಗ ಆ ರೀತಿ ಪೋಟೋ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಟೋಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿಡಿ 2 ರಿಂದ 13 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ಸಂಬಂಧಿಸಿದ ಸಿಡಿಯನ್ನು ನಿಡಿ 14 ಎಂದು ಗುರುತಿಸಲಾಯಿತು. ಫೋಟೋದಲ್ಲಿ ಕಾಣಿಸುವಂತೆ ನಾನು ಕೆಲಸ ಮಾಡಿರುವುದು ನ್ಯಾಯಾಲಯದಿಂದ ಈ ದಾವೆಯಲ್ಲಿ ಆದೇಶ ಪಡೆದ ಮೇಲೆ ಎಂದರೆ ಹೌದು. ಅದಕ್ಕೂ ಮುಂಚಿತವಾಗಿ ಒಂದು ಬಾರಿ ಕ್ಲೀನ್ ಮಾಡಿದ್ದೆವು ಎಂದು ನುಡಿಯುತ್ತಾರೆ. ಪ್ರತಿವಾದಿ ನ್ಯಾಯಾಲಯದ ಆದೇಶದವನ್ನು ಉಲ್ಲಂಘಟನೆ ಮಾಡಿರುತ್ತಾರೆ ಎಂದು ಒಂದು ಅರ್ಜಿಯನ್ನು ಈ ದಾವೆಯಲ್ಲಿ ಸಲಿಸಿದ್ದೇನೆ ಎಂದರೆ ಹೌದು. ಈ ದಾವೆಯಲ್ಲಿ ನನಗೆ ಮನೆ ಕಟ್ಟಲು ಯಾವುದೇ ಆದೇಶವನ್ನು ನೀಡಿಲ್ಲ ಎಂದರೆ ಸರಿಯಲ್ಲ, ಮೊದಲು ನೀಡಿದ್ದರು. ನನ್ನ ಹೆಂಡತಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದು ರಾಜಕೀಯ ಮತ್ತು ಹಣ ಬಲದಿಂದ ಪ್ರತಿವಾದಿಗೆ ಸೇರಿದ ಆಸ್ತಿಗೆ ಅಕ್ರಮವಾಗಿ ಪ್ರವೇಶ ಮಾಡಿ ನಷ್ಟ ಉಂಟುಮಾಡಿರುತ್ತೇನೆ ಎಂದರೆ ಸರಿಯಲ್ಲ, ದಾವಾ ಆಸ್ತಿಯು ದಕ್ಷಿಣ ದಿಕ್ಕಿನ ಮೇಲೆ ಹೇಳಿದ ಸೋಮಣ್ಣನವರ ಆಸ್ತಿಯನ್ನು ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಹೌದು. ಸದರಿ ಕ್ರಯ ಪತ್ರವನ್ನು ನಾನು ನೋಡಿಲ್ಲ, ಸದರಿ ಕ್ರಯ ಪತ್ರದಂತೆ ಉತ್ತರ ದಿಕ್ಕಿನ ರಸ್ತೆಯ ವರೆವಿಗೂ ಆಸ್ತಿಯನ್ನು ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ದಾವಾ ಆಸ್ತಿ ನನಗೆ

ಮತ್ತು ನನ್ನ ತಾಯಿಗೆ ಯಾವತ್ತೂ ಸೇರಿಲ್ಲ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆಎಂಎಫ್‌ಸಿ.,
ಶ್ರೀರಂಗಪಟ್ಟಣ.